ಪ್ರಧಾನ ಹಿರಿಯ **ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,**

ನಾಗಮಂಗಲ.

**ಸಿ ಸಿ ನಂಃ 1061/2022**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ಗೀತಾ ಎಲ್ | **ದಿನಾಂಕ** | ಃ **09-03-2025** |
| ಗಂಡನ **ಹೆಸರು** | ಃ ರವಿ ಕೆ. ಎಸ್. | **ಸಿ ಡಬ್ಲ್ಯೂ** | ಃ **09** |
| **ವಯಸ್ಸು** | ಃ **36 ವರ್ಷ** | **ಪಿ ಡಬ್ಲ್ಯೂ** | ಃ **04** |
| **ಉದ್ಯೋಗ** | ಃ ಅಬಕಾರಿ ನಿರೀಕ್ಷಕರು, ಚನ್ನಪಟ್ಟಣ | | |
| **ವಿಳಾಸ** | ಃ ಚನ್ನಪಟ್ಟಣ | | |

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ನಾನು ದಿನಾಂಕಃ **06-03-2021** ರಿಂದ **24-09-2024** ರವರೆಗೆ ನಾಗಮಂಗಲ ತಾಲ್ಲೋಕಿನಲ್ಲಿ ಅಬಕಾರಿ ನಿರೀಕ್ಷಕರಾಗಿ ಕೆಲಸ ನಿರ್ವಹಿಸಿದ್ದೇನು.

ದಿಃ **31-05-2022** ರಂದು ಸಂಜೆ **04 – 30** ಗಂಟೆಯ ಸಮಯದಲ್ಲಿ ನಾನು ನನ್ನ ಕಛೇರಿಯಲ್ಲಿ ಇದ್ದ ಸಮಯದಲ್ಲಿ ಬೆಳ್ಳೂರು ಕ್ರಾಸ್ ಕಡೆಯಿಂದ ನಾಗಮಂಗಲ ನಗರ ಕಡೆಗೆ ಒಬ್ಬ ವ್ಯಕ್ತಿ ಗಾಂಜಾವನ್ನು ಖರೀದಿ ಮಾಡಲು ಬರುತ್ತಿದ್ದಾರೆ ಎಂದು ಪ್ರಾಸಾ.**1** ರವರಿಗೆ ಮಾಹಿತಿ ಬಂದಿದ್ದು ನಂತರ ಪ್ರಾಸಾ.**1** ರವರು ನನ್ನನ್ನು ಹಾಗೂ ಚಾಸಾ.**3** ರಿಂದ **6** ರವರನ್ನು ಕರೆದುಕೊಂಡು ನಾಗಮಂಗಲ ಟಿ. ಬಿ. ಬಡಾವಣೆಯಲ್ಲಿರುವ ಆಟೋ ನಿಲ್ದಾಣದ ಬಳಿ ಕರೆದುಕೊಂಡು ಹೋಗಿರುತ್ತಾರೆ. ನಾವು ಸದರಿ ಆಟೋ ನಿಲ್ದಾಣದ ಬಳಿ ಹೋದಾಗ ಕಪ್ಪು ಟಿ ಶರ್ಟ್ ಧರಿಸಿದ್ದ ಒಬ್ಬ ವ್ಯಕ್ತಿ ಒಂದು ಆಟೋದ ಒಳಗೆ ಕುಳಿತುಕೊಂಡಿರುವುದು ಕಂಡು ಬಂದಿತು. ನಂತರ ಸದರಿ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ ಆತನ ಹೆಸರು ಹರೀಶ ಎಂದು ಆತನು ತುರುವೆಕೆರೆಯಿಂದ ಬಂದಿರುವುದಾಗಿ ತಿಳಿಸಿದ್ದು ಸುಭಾಷ್ ನಗರದ ಹುಸೇನ್ ಬಿ ಎಂಬುವವರು ಗಾಂಜಾವನ್ನು ಮಾರಾಟ ಮಾಡುತ್ತಿರುವುದಾಗಿ ಮತ್ತು ಆತನು ಅದನ್ನು ಖರೀದಿ ಮಾಡಲು ಬಂದಿರುವುದಾಗಿ ತಿಳಿಸಿರುತ್ತಾನೆ. ಕಾರಣ ನಾವು ಸ್ಥಳದಲ್ಲಿ ಇದ್ದ ವ್ಯಕ್ತಿಗಳನ್ನು ಕರೆದು ಅವರಿಗೆ ವಿಚಾರ ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೇಳಿದ್ದು ಅವರು ಯಾರೂ ಸಹ ಒಪ್ಪಿರಲಿಲ್ಲ. ಕಾರಣ ಸದರಿ ಹರೀಶ ರವರನ್ನು ನಮ್ಮ ಇಲಾಖಾ ವಾಹನದಲ್ಲಿ ಕರೆದುಕೊಂಡು ಸುಭಾಷ್ ನಗರದಲ್ಲಿ ಇರುವ ಒಂದು ಮನೆಯ ಬಳಿ ಕರೆದುಕೊಂಡು ಹೋಗಿರುತ್ತಾರೆ. ನಾವು

ಸದರಿ ಮನೆಯನ್ನು ತಲುಪಿದಾಗ ಸದರಿ ಮನೆಯ ಬಳಿ ಒಬ್ಬ ಹೆಂಗಸು ಇದ್ದು ಹರೀಶ ರವರು ಆಕೆಯನ್ನು ತೋರಿಸಿ ಅವರೇ ಹುಸೇನ್ ಬಿ ಎಂದು ತಿಳಿಸಿರುತ್ತಾರೆ. ನಂತರ ನಾವು ಸ್ಥಳದಲ್ಲಿ ಇದ್ದ ವ್ಯಕ್ತಿಗಳಿಗೆ ವಿಚಾರವನ್ನು ತಿಳಿಸಿ ದಾಳಿಗೆ ಸಹಕರಿಸುವಂತೆ ಕೇಳಿದಾಗ ಅವರು ನಿರಾಕರಿಸಿದ ಕಾರಣ ಪ್ರಾಸಾ.1 ರವರು ನನ್ನನ್ನು ಹಾಗೂ ಇತರೇ ಸಿಬ್ಬಂಧಿಗಳನ್ನು ಪಂಚರನ್ನಾಗಿ ಮಾಡಿಕೊಂಡು ಹರೀಶ ರವರು ತೋರಿಸಿದ ಮನೆಯ ಮೇಲೆ ದಾಳಿ ಮಾಡಿರುತ್ತೇವೆ. ದೂರನ್ನು ನೀಡಲು ಸಮಯಾವಕಾಶ ಇಲ್ಲದ ಕಾರಣ ಪ್ರಾಸಾ.1 ರವರು ಸ್ಥಳದಲ್ಲಿ ಶೋಧನಾ ವಾರೆಂಟ್ ನ್ನು ತಯಾರಿಸಿ ಅದಕ್ಕೆ ಸಾಕ್ಷಿದಾರರ ಸಹಿಯನ್ನು ಪಡೆದುಕೊಂಡಿರುತ್ತಾರೆ. ನಂತರ ನಾವು ಸದರಿ ಮನೆಯ ಬಾಗಿಲು ತೆರೆದು ಮನೆಯ ಒಳಗೆ ಪ್ರವೇಶಿಸಿದಾಗ ಬಾಗಿಲ ಬಲಭಾಗದಲ್ಲಿ ಒಂದು ಕಬ್ಬಿಣದ ಮಂಚ ಇರುವುದು ಕಂಡು ಬಂದಿತು. ಅದರಂತೆ ಸದರಿ ಮಂಚದ ಮೇಲೆ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ಇರುವುದು ಕಂಡು ಬಂದಿತು. ನಾವು ಸದರಿ ಕವರ್ ನ್ನು ತೆರೆದು ನೋಡಲಾಗಿ ಅದರ ಒಳಗೆ ಮೂರು ಸಣ್ಣ ಪ್ಯಾಕೇಟುಗಳು ಇರುವುದು ಹಾಗೂ ಸೊಪ್ಪು ಇರುವುದು ಕಂಡು ಬಂದಿತು. ಸದರಿ ಪ್ಯಾಕೇಟುಗಳನ್ನು ತೆರೆದು ನೋಡಲಾಗಿ ಅದರಿಂದ ಘಾಟು ವಾಸನೆ ಬಂದಿರುತ್ತದೆ. ಅದರಂತೆ ಸೊಪ್ಪು ಸಹ ಘಾಟು ವಾಸನೆಯಿಂದ ಕೂಡಿತ್ತು. ನಂತರ ನಮ್ಮ ಇಲಾಖಾ ವಾಹನದಲ್ಲಿ ಇದ್ದ ತೂಕ ಮಾಡುವ ಮಾಪನವನ್ನು ತರಿಸಿ ಸ್ಥಳದಲ್ಲಿ ಇದ್ದ ಪ್ಯಾಕೇಟುಗಳನ್ನು ಹಾಗೂ ಸೊಪ್ಪನ್ನು ತೂಕ ಮಾಡಿ ನೋಡಲಾಗಿ ಅದು **95** ಗ್ರಾಂ ಇರುವುದು ಕಂಡು ಬಂದಿತು. ನಂತರ ಸ್ಥಳದಲ್ಲಿ ಇದ್ದ ಮಹಿಳೆಯನ್ನು ವಿಚಾರಿಸಲಾಗಿ ಆಕೆಯ ಹೆಸರು ಹುಸೇನ್ ಬಿ ಎಂದು ಸದರಿ ಗಾಂಜಾವನ್ನು ಮಾರಾಟ ಮಾಡಿ ಲಾಭ ಗಳಿಸುವ ಉದ್ದೇಶದಿಂದ ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ. ಕಾರಣ ಸದರಿ ಗಾಂಜಾವನ್ನು ಅಕ್ರಮ ಗಾಂಜಾ ಎಂದು ಪರಿಗಣಿಸಿ ಅದನ್ನು ಅಮಾನತ್ತು ಪಡಿಸಿಕೊಂಡು ಆ ಬಗ್ಗೆ ಮಹಜರ್ ಕ್ರಮ ಜರುಗಿಸಿ ಅದಕ್ಕೆ ನನ್ನ ಸಹಿ ಪಡೆದಿರುತ್ತಾರೆ. ನಂತರ ವಶಪಡಿಸಿಕೊಂಡ ಗಾಂಜಾದ ಪೈಕಿ ತಲಾ **30** ಗ್ರಾಂ ನಂತೆ ಎರಡು ಪ್ಯಾಕೇಟುಗಳನ್ನು ರಾಸಾಯನಿಕ ಪರೀಕ್ಷೆಗೆ ಪ್ರತ್ಯೇಕ ಪಡಿಸಿ ಅದಕ್ಕೆ ನಮ್ಮ ಇಲಾಖಾ ಮುದ್ರೆಯನ್ನು ಹಾಕಿ ಮಾದರಿ ಸಹಿವುಳ್ಳ ಚೀಟಿಯನ್ನು ಅಂಟಿಸಲಾಯಿತು. ನಂತರ ವಶಪಡಿಸಿಕೊಂಡ ಮಾಲನ್ನು ತೆಗೆದುಕೊಂಡು ಆರೋಪಿಯೊಂದಿಗೆ ಠಾಣೆಗೆ ತೆರಳಿರುತ್ತೇವೆ. ನಂತರ ಪ್ರಾಸಾ.1 ರವರು ಠಾಣಾ ಗುಣ ಸಂಖ್ಯೆ **31/2021-22** ರಂತೆ ಪ್ರಕರಣವನ್ನು ನೋಂದಾಯಿಸಿ

ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ನಂತರ ದಿನಾಂಕಃ **05-07-2022** ರಂದು ಪ್ರಾಸಾ.**1** ರವರು ಮುಂದಿನ ತನಿಖೆಗೆ ಕಡತವನ್ನು ನನಗೆ ವಹಿಸಿ ಕೊಟ್ಟಿರುತ್ತಾರೆ.

**2.** ನಂತರ ತನಿಖೆಯನ್ನು ಮುಂದುವರೆಸಿ ದಿನಾಂಕಃ **06-07-2022** ರಂದು ಮನೆಗೆ ಸಂಬಂಧಿಸಿದಂತೆ ದಾಖಲೆ ನೀಡುವಂತೆ ನಾಗಮಂಗಲ ಪುರಸಭೆ ಕಾರ್ಯಾಲಯಕ್ಕೆ ನಿವೇದನೆ ಸಲ್ಲಿಸಿರುತ್ತೇನೆ. ನಂತರ ದಿನಾಂಕಃ **22-08-2022** ರಂದು ನಾಗಮಂಗಲ ಪುರಸಭೆ ಮುಖ್ಯಾಧಿಕಾರಿಗಳು ನೀಡಿರುವ ಹಿಂಬರಹವನ್ನು ಸ್ವೀಕರಿಸಿರುತ್ತೇನೆ. ನಂತರ ದಿನಾಂಕಃ **28-08-2022** ರಂದು ಆರೋಪಿಯನ್ನು ವಿಚಾರಣೆಗೆ ಒಳಪಡಿಸಿ ಆಕೆಯಿಂದ ಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ ದಿನಾಂಕಃ **05-09-2022** ರಂದು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ದಿನಾಂಕಃ **07-09-2022** ರಂದು ರಾಸಾಯನಿಕಾ ಪರೀಕ್ಷಾ ವರದಿಯನ್ನು ಸ್ವೀಕರಿಸಿರುತ್ತೇನೆ. ಆ ವೇಳೆಗೆ ತನಿಖೆ ಪೂರ್ಣಗೊಂಡು ಆರೋಪಿಯ ವಿರುದ್ಧ ಆರೋಪಿ ಸಾಬೀತು ಆದ ಕಾರಣ ಆಕೆಯ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**3.** ಸಾಕ್ಷಿ ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.**4** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.**4**(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.**5** ಮತ್ತು **6** ಎಂದು ಗುರುತಿಸಲಾಗಿದೆ. ಸಾಕ್ಷಿ ರಾಸಾಯನಿಕ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.**10** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.**10**(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ನಾಗಮಂಗಲ ಪುರಸಭೆಯವರು ನೀಡಿರುವ ಹಿಂಬರಹವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.**12** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.**12**(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ.**1** ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ. ಡಿ. ಆರ್. ಎಂ. ವಕೀಲರಿಂದ,</u>

ನಾವು ಟಿ. ಬಿ. ವೃತ್ತಕ್ಕೆ ಭೇಟಿ ನೀಡಿದಾಗ ಅಲ್ಲಿ ಸುಮಾರು **4 – 5** ಆಟೋಗಳು ಇದ್ದವು. ಆಟೋದಲ್ಲಿ ಒಬ್ಬ ವ್ಯಕ್ತಿ ಕಪ್ಪು ಟಿ ಶರ್ಟ್ ಧರಿಸಿ

ಕುಳಿತಿದ್ದನು ಎಂದು ಹೇಳಿದ್ದು ಸದರಿ ಆಟೋದ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ಸದರಿ ಆಟೋದ ಚಾಲಕನನ್ನು ನಾವು ವಿಚಾರಣೆ ಮಾಡಿ ಆಟೋ ಎಲ್ಲಿಂದ ಬಂದಿತ್ತು ಎಂಬ ಬಗ್ಗೆ ಆತನನ್ನು ವಿಚಾರಿಸಿ ಆತನ ಹೇಳಿಕೆ ಪಡೆದುಕೊಂಡಿರಲಿಲ್ಲ. ಸದರಿ ಆಟೋ ಚಾಲಕನನ್ನು ನಾನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ. ಹರೀಶ ರವರು ಆರೋಪಿಯ ಮನೆಯನ್ನು ತೋರಿಸಿದ್ದು ಸದರಿ ಮನೆ ಆರೋಪಿಗೆ ಸೇರಿದ ಮನೆ ಎಂಬುದು ಹೇಗೆ ಗೊತ್ತು ಎಂದು ನಾನು ಸದರಿ ಹರೀಶ ರವರನ್ನು ವಿಚಾರಣೆ ಮಾಡಿರಲಿಲ್ಲ. ಮನೆಯ ಒಳಗೆ ಹೋದಾಗ ಮಂಚದ ಮೇಲೆ ಕಪ್ಪು ಬಣ್ಣದ ಕವರ್ ಇತ್ತು ಎಂದು ಹೇಳಿದ್ದು ಮಂಚದ ಮೇಲೆ ಸದರಿ ಕವರ್ ಇತ್ತು ಎಂದು ತೋರಿಸುವ ಬಗ್ಗೆ ನಾವು ಛಾಯಾ ಚಿತ್ರ ತೆಗೆದಿರುವುದಿಲ್ಲ. ಸ್ಥಳಕ್ಕೆ ಭೇಟಿ ನೀಡಿದಾಗ ನಾವು ನಮ್ಮ ಅಂಗ ಶೋಧನಾ ಮಹಜರ್ ನ್ನು ಮಾಡಿರಲಿಲ್ಲ. ಗಾಂಜಾವನ್ನು ವಶಪಡಿಸಿಕೊಂಡು ಮಹಜರ್ ಮಾಡಿರುತ್ತೇವೆ ಎಂದು ಹೇಳಿದ್ದು ಸದರಿ ಗಾಂಜಾವನ್ನು ವಶಪಡಿಸಿಕೊಂಡ ಬಗ್ಗೆ ನಾವು ಪ್ರತ್ಯೇಕವಾದ ಅಮಾನತ್ತು ಮಹಜರ್ ಕ್ರಮ ಜರುಗಿಸಿರುವುದಿಲ್ಲ. ಅಳತೆ ಮಾಪನವನ್ನು ನಾವು ನಮ್ಮ ಇಲಾಖಾ ವಾಹನದಲ್ಲಿ ತೆಗೆದುಕೊಂಡು ಹೋಗಿದ್ದೆವು ಎಂದು ಹೇಳಿದ್ದು ಸದರಿ ಅಳತೆ ಮಾಪನ ನಮ್ಮ ವಾಹನದಲ್ಲಿ ಇದ್ದ ಬಗ್ಗೆ ನಾವು ಛಾಯಾ ಚಿತ್ರ ತೆಗೆದಿರಲಿಲ್ಲ.

2. ನಾನು ಹೇಳಿದಂತೆ ಪ್ರಾಸಾ.1 ರವರಿಗೆ ಗಾಂಜಾ ಮಾರಾಟದ ಬಗ್ಗೆ ಯಾವುದೇ ಮಾಹಿತಿ ಬಂದಿರಲಿಲ್ಲ, ನಾವು ಟಿ. ಬಿ. ವೃತ್ತದ ಬಳಿ ಹೋಗಿ ಹರೀಶ ರವರನ್ನು ವಿಚಾರಣೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಹರೀಶ ರವರು ನಮ್ಮನ್ನು ಯಾವುದೇ ಮನೆಯ ಬಳಿ ಕರೆದುಕೊಂಡು ಹೋಗಿರಲಿಲ್ಲ ಮತ್ತು ಯಾವುದೇ ಮನೆಯನ್ನು ತೋರಿಸಿರಲಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಆ ರೀತಿ ನಾವು ಹರೀಶ ರವರನ್ನು ಭೇಟಿ ಮಾಡಿ ಆತನನ್ನು ವಿಚಾರಿಸಿ ಆತನು ಗಾಂಜಾ ಖರೀದಿಸಲು ಬಂದಿರುವುದಾಗಿ ನಮಗೆ ತಿಳಿಸಿದ್ದರೆ ನಾವು ಆತನನ್ನೂ ಸಹ ಆರೋಪಿಯನ್ನಾಗಿ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಹರೀಶ ರವರನ್ನು ಸಾಕ್ಷಿದಾರರನ್ನಾಗಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಾವು ಭೇಟಿ ಮಾಡಿದ್ದೆವು ಎಂದು ಹೇಳಲಾದ ಮನೆಯ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ನನ್ನ ತನಿಖಾ ಸಮಯದಲ್ಲಿ ನಾನು ನಿಪಿ.8 ನ್ನು ಪರಿಶೀಲನೆ ಮಾಡಿರುತ್ತೇನೆ. ಆ ರೀತಿ ಪರಿಶೀಲನೆ

ಮಾಡುವಾಗ ಆ.ನಂಬರ್ 4 ರಲ್ಲಿ ನಮೂದಿಸಿರುವ ವ್ಯಕ್ತಿಯೂ ಓಡಿ ಹೋದ ಆರೋಪಿ ಆಗಿರುತ್ತಾರೆ ಎಂದು ನಮೂದು ಇರುತ್ತದೆ ಎಂದರೆ ಸರಿ. ನಾನು ಹೇಳಿದಂತೆ ಆರೋಪಿ ಯಾವುದೇ ಗಾಂಜಾವನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖಾ ಕಛೇರಿಯಲ್ಲಿ ವಿಲೇವಾರಿ ಆಗದ ಗಾಂಜಾವನ್ನು ಉಪಯೋಗಿಸಿ ಅದನ್ನು ಆರೋಪಿಯ ಮನೆಗೆ ತೆಗೆದುಕೊಂಡು ಅದನ್ನು ಅಲ್ಲಿಂದ ಅಮಾನತ್ತು ಪಡಿಸಿಕೊಂಡೆವು ಎಂದು ನಮ್ಮ ಇಲಾಖಾ ಅಂಕಿ ಅಂಶಕ್ಕೋಸ್ಕರ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ನಾಗಮಂಗಲ.